ಸಾಕ್ಷಿಯನ್ನು ದಿನಾಂಕ 03-08-2023 ರಂದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ ಎಸ್ ಬಿ ವಕೀಲರಿಂದಃ**

ನಾನು ಚೆನ್ನಪ್ಪನ ವಾರಸುದಾರ ಆಗಿರುತ್ತೇನೆ. ಚೆನ್ನಪ್ಪನ ವಿರುದ್ಧ ಶಾಂತವ್ವ ಒಂದು ದಾವೆ ಸಲ್ಲಿಸಿದ್ದಳು ಎಂದರೆ ನಿಜ. ಸದರಿ ದಾವೆಯಲ್ಲಿ ಚೆನ್ನಪ್ಪ ಸಲ್ಲಿಸಿರುವ ಕೈಫಿಯತ್ ನಲ್ಲಿ ಶಾಂತವ್ವಳ ಗುರುಸಿದ್ದಪ್ಪ ಆಸ್ತಿಯನ್ನು ಬಿಟ್ಟುಕೊಟ್ಟು ಲೇಖಿಯನ್ನು ಮಾಡಿಕೊಟ್ಟಿದ್ದಾರೆಂದು ತಕರಾರು ಮಾಡಿದ್ದ ಎಂದರೆ ನಿಜ. ಆ ದಾವೆ ಡಿಕ್ರಿಯಾಗಿತ್ತು ಎಂದರೆ ನಿಜ. ಅದರ ವಿರುದ್ಧ ಚೆನ್ನಪ್ಪ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದ ಎಂದರೆ ನಿಜ. ಸದರಿ ಮೇಲ್ಮನವಿ ಪುರಸ್ಕೃತಗೊಂಡಿತ್ತು ಎಂದರೆ ನಿಜ. ಅದರ ವಿರುದ್ಧ ಶಾಂತವ್ವ 2 ನೇ ಮೇಲ್ಮನವಿಯನ್ನು ಸಲ್ಲಿಸಿದ್ದಳು ಎಂದರೆ ನಿಜ. ಬಸಪ್ಪ ಅಥವಾ ಆತನ ಮಗ ಮಲ್ಲಿಕಾರ್ಜುನ ಅಥವಾ ಆತನ ಸಹೋದರಿಯರು ಚೆನ್ನಪ್ಪನಿಗೆ ಅಥವಾ ಗುರುಸಿದ್ದಪ್ಪನಿಗೆ ಅವರು ಹಿಸ್ಸೆ ಬಿಟ್ಟುಕೊಟ್ಟಿದ್ದಾರೆ ಎಂದು ಸದರಿ ಶಾಂತವ್ವ ಸಲ್ಲಿಸಿದ ದಾವೆಗೆ ಚೆನ್ನಪ್ಪ ಸಲ್ಲಿಸಿರುವ ಕೈಫಿಯತ್‌ನಲ್ಲಿ ನಮೂದಿಸಿಲ್ಲ ಎಂದರೆ ನಿಜ. ಶಾಂತವ್ವ ಹಾಗೂ ಚೆನ್ನಪ್ಪ ಸದರಿ ಶಾಂತವ್ವ ದಾಖಲಿಸಿರುವ ದಾವೆಯಲ್ಲಿ ಪರಸ್ಪರ ವಿರೋಧ ಪಕ್ಷಗಾರರು ಇದ್ದರು ಎಂದರೆ ನಿಜ.

ಈ ದಾವೆಯಲ್ಲಿ ಶಾಂತವ್ವ ಏನು ತಕರಾರು ಸಲ್ಲಿಸಿದ್ದಾಳೆ ಎಂದು ಹೇಳಲು ಗೊತ್ತಿಲ್ಲ. ಈ ದಾವೆಯಲ್ಲಿ ಶಾಂತವ್ವ ಹೇಳುವುದನ್ನು ನಾನು ಬಿಂಬಲಿಸುತ್ತಿದ್ದೇವೆ ಹಾಗೂ ನಾವು ಹೇಳುವುದನ್ನು ಶಾಂತವ್ವ ಬೆಂಬಲಿಸುತ್ತಿದ್ದಾಳೆ ಎಂದರೆ ನಾನು ನನ್ನ ಪರ ಸಾಕ್ಷಿ ಹೇಳಲು ಬಂದಿದ್ದೇನೆ ಎಂದು ನುಡಿಯುತ್ತೇನೆ. ಈ ದಾವೆಯಲ್ಲಿ ನಾವು ಪ್ರತಿಪಾದಿಸುತ್ತಿರುವುದು ಹಾಗೂ ಶಾಂತವ್ವ ಪ್ರತಿಪಾದಿಸುತ್ತಿರುವುದು ಎರೆಡೂ ಒಂದೇ ತರಹ ಇದೆ ಎಂದರೆ ಇರಬಹುದು. ಗುರುಸಿದ್ದಪ್ಪ ಹಕ್ಕುಬಿಟ್ಟುಕೊಟ್ಟಿರುವುದರಿಂದ ಎಲ್ಲ ಆಸ್ತಿಗಳಿಗೂ ನಾವೇ ಮಾಲೀಕರು ಎಂದು ನಮ್ಮ ಕೈಫಿಯತ್‌ನಲ್ಲಿ ಹೇಳಿಲ್ಲ ಎಂದರೆ ನಿಜ. ಈಗ ತೋರಿಸುತ್ತಿರುವ ನಿಡಿ.1 ರ ಅಸಲು ಕಾಗದವನ್ನು ತಂದು ಹಾಜರಪಡಿಸಲು ನಮಗೆ ತೊಂದರೆ ಇಲ್ಲ ಎಂದರೆ ನಿಜ. ಸದರಿ ನಿಡಿ.1 ದಾಖಲೆ ಕುರಿತಂತೆ ಮಲ್ಲಿಕಾರ್ಜುನ ರವರು ದಾಖಲಿಸಿರುವ ಎಕ್ಸಿಕ್ಯೂಶನ್ ಕೇಸಿನಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ

ನುಡಿಯುತ್ತಾರೆ ರೊಕ್ಕ ಕೊಟ್ಟ ಬಗ್ಗೆ ಪಾವತಿಯನ್ನು ಆ ಕೇಸಿನಲ್ಲಿ ಹಾಜರಪಡಿಸಲಾಗಿತ್ತು. ಆ ರೀತಿ ಪಾವತಿ ಹಾಜರಪಡಿಸಲಾಗಿತ್ತು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಹೇಳಲು ನೆನಪಿಲ್ಲ. ಆ ರೀತಿ ಎಕ್ಸಿಕ್ಯೂಶನ್ ಕೇಸಿನ ದಾಖಲೆಗಳನ್ನು ಪರಿಶೀಲಿಸಿ ನಾನು ಹೇಳುತ್ತಿರುವುದೇ ಅಥವಾ ಯಾವ ಆಧಾರದಲ್ಲಿ ಹೇಳುತ್ತಿರುವುದು ಎಂದು ಕೇಳಿದರೆ ನನಗೆ ಇರುವ ಮಾಹಿತಿ ಮೇರೆಗೆ ಹೇಳುತ್ತಿರುವುದು ಎಂದು ನುಡಿಯುತ್ತೇನೆ. ದಾಖಲೆಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳದೇ ಸಾಕ್ಷಿ ಹೇಳುತ್ತಿದ್ದೇನೆಯೇ ಎಂದು ಕೇಳಿದರೆ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತೇನೆ. ಯಾವ ತಾರೀಕಿಗೆ ನಾನು ಹೇಳುತ್ತಿರುವ ರಾಜೀ ಪತ್ರವನ್ನು ಎಕ್ಸಿಕ್ಯೂಶನ್ ಕೇಸಿನಲ್ಲಿ ಹಾಜರಪಡಿಸಲಾಗಿತ್ತು ಎಂದು ಕೇಳಿದರೆ ತಾರೀಕು ಹೇಳಲು ನೆನಪಿಲ್ಲ ಎಂದು ನುಡಿಯುತ್ತೇನೆ. ಅದನ್ನು ಯಾವ ವಕೀಲರು ಹಾಜರಪಡಿಸಿದ್ದು ಎಂದು ಕೇಳಿದರೆ ಹೊಸಮನಿ ವಕೀಲರು ಹಾಜರಪಡಿಸಿದ್ದು ಎಂದು ನುಡಿಯುತ್ತೇನೆ. ನಿಡಿ.1 ರ ಬಗ್ಗೆ ಸದರಿ ಎಕ್ಸಿಕ್ಯೂಶನ್ ಕೇಸಿನಲ್ಲಿ ಯಾವುದೇ ಉಲ್ಲೇಖ ಯಾವತ್ತೂ ಕೂಡ ಬಂದಿರಲಿಲ್ಲ ಎಂದರೆ ನಿಜ. ನಮ್ಮ ಕೈಫಿಯತ್‌ನಲ್ಲಿ ಈ ದಾವೆಯಲ್ಲಿ ಸದರಿ ನಿಡಿ.1 ರ ಬಗ್ಗೆ ನಾವು ಉಲ್ಲೇಖಿಸಿಲ್ಲ ಎಂದರೆ ನಿಜ. ಈ ದಾವೆ ಸಲ್ಲಿಸಿದ ನಂತರ ನಿಡಿ.1 ನ್ನು ನಾವು ಸೃಷ್ಟಿ ಮಾಡಿ ಹಾಜರಪಡಿಸಿರುವುದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ರೊಕ್ಕ ಸ್ವೀಕರಿಸಿಯೇ ದಾವೆ ಹಿಂದೆ ಪಡೆದುಕೊಂಡಿದ್ದಾರೆ. ಈಗ ತೋರಿಸುತ್ತಿರುವ ನಿಡಿ.4 ರಲ್ಲಿ "ಇವತ್ತಿನ ದಿವಸ ನೀವು ರಾಜೀಯಲ್ಲಿ ಕೊಟ್ಟ 1400000/- ಹದಿನಾಲ್ಕು ಲಕ್ಷ ರೂಪಾಯಿಗಳನ್ನು ನನ್ನ ಅಳಿಯನಾದ ಮಲ್ಲಿಕಾರ್ಜುನ ಬಸಪ್ಪ ಉರ್ಫ್ ಬಸವಣ್ಣೆಪ್ಪ ಹೊರೂರ ಇವರಿಗೆ ಕೊಟ್ಟಿರುತ್ತೀರಿ. ಆ ಬಗ್ಗೆ ಅಲಾಹಿದಾ ಪಾವತಿಯನ್ನು ನನ್ನ ಅಳಿಯ ಸ್ಟ್ಯಾಂಪಿನ ಮೇಲೆ ಸಹಿ ಹಾಕಿ ಪಾವತಿ ಕೊಟ್ಟಿದ್ದಾನೆ" ಎಂದು ಇರುವ ಬಗ್ಗೆ ನಿಡಿ.4 ರಲ್ಲಿ ಯಾರು ಸಹಿ ಮಾಡಿದ್ದಾರೆ ಎಂದು ಕೇಳಿದರೆ ಮಲ್ಲಿಕಾರ್ಜುನ ಹೊಸೂರರವರು ಸಹಿ ಮಾಡಿದ್ದಾರೆ ಎಂದು ನುಡಿಯುತ್ತೇನೆ. ಸದರಿ ಮಲ್ಲಿಕಾರ್ಜುನ ಹೊಸೂರರವರು ಈ ದಾವೆಯ ವಾದಿ ಬಸವರಾಜರವರ ತಂದೆ ಎಂದರೆ ನಿಜ. ಈಗ ತೋರಿಸುತ್ತಿರುವ ನಿಡಿ.5 ರ

ಅಸಲು ಪ್ರತಿ ನನ್ನ ಕಡೆ ಇದೆಯೇ ಎಂದರೆ ಇದೆ ಎಂದು ನುಡಿಯುತ್ತೇನೆ. ನಿಡಿ.1 ರಿಂದ 4 ರ ಅಸಲು ಕಾಗದಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ನಿಜ. ನಿಡಿ.1 ರಾಜೀ ಪತ್ರಕ್ಕೆ ವಾದಿಯರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯರ ಸಹಿ ಅದರಲ್ಲಿ ಇದೆಯೇ ಎಂದರೆ ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತೇನೆ.

ಚೆನ್ನಪ್ಪ ದಾಖಲೆಗಳನ್ನು ಸೃಷ್ಟಿ ಮಾಡುವಂತಹ ಪ್ರವೃತ್ತಿ ಹೊಂದಿದವನಾಗಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಸದರಿ ದಾಖಲೆಗಳೆಲ್ಲವೂ ವಾಸ್ತವತೆ ಆಗಿರುತ್ತೆ. ಭೂಸ್ವಾಧೀನ ಆದ ಹಣವನ್ನು ಚೆನ್ನಪ್ಪ ದಾಖಲೆ ಸೃಷ್ಟಿ ಮಾಡಿ ಒಬ್ಬನೇ ಹೊಡೆದುಕೊಂಡ ಬಗ್ಗೆ ಕ್ರಿಮಿನಲ್ ಕೇಸ್ ಆಗಿತ್ತು ಎಂದರೆ ಕ್ರಿಮಿನಲ್ ಕೇಸ್ ಆಗಿದ್ದು ಮಾತ್ರ ನಿಜ ಎಂದು ನುಡಿಯುತ್ತೇನೆ. ಚೆನ್ನಪ್ಪ ನ್ಯಾಯಾಲಯಕ್ಕೂ ಕೂಡ ಮೋಸ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಮಾಡಿ ಶಾಂತವ್ವಳ ಆಸ್ತಿಯನ್ನು ಕೂಡ ಎತ್ತಿಹಾಕಬೇಕೆಂದು ದುರುದ್ದೇಶವನ್ನು ಚೆನ್ನಪ್ಪ ಹೊಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಕೋರ್ಟಿನಲ್ಲಿ ಕೇಸ್ ನಡೆಯುತ್ತಿದೆ. ಅದೇ ರೀತಿ ಎಲ್ಲರ ಆಸ್ತಿಯನ್ನು ಚೆನ್ನಪ್ಪ ಎತ್ತಿಹಾಕಕೊಳ್ಳಬೇಕು ಎಂದು ದುರುದ್ದೇಶ ಹೊಂದಿಲ್ಲ ಹಾಗೂ ಅದೇ ಪ್ರವೃತ್ತಿ ಹೊಂದಿದ್ದ ಎಂದರೆ ಸರಿಯಲ್ಲ. ಹಿಂದೆ ಆದ ರಾಜೀ ಡಿಕ್ರಿಯ ನಂತರ ಯಾವುದೇ ರಾಜೀಯಾಗಿಲ್ಲವಾದರೂ ಕೂಡ ದರಖಾಸ್ತ ಅರ್ಜಿಯಲ್ಲಿ ರಾಜೀಯಾಗಿದೆ ಎಂದು ಸುಳ್ಳು ಪ್ರತಿಪಾದನೆಮಾಡುತ್ತಿರಜುವುದು ಹಾಗೂ ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ. ಸದರಿ ರಾಜೀ ಡಿಕ್ರಿ ಪ್ರಕಾರ ವಾದಿಯರಿಗೆ ಹಿಸ್ಸೆ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ವಾದಿಯರ ತಂದೆಯೇ ಹಕ್ಕನ್ನು ಬಿಟ್ಟುಕೊಟ್ಟಿದ್ದಾರೆ. ಎಲ್ಲ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಒಟ್ಟು 20 ಎಕರೆ ಆಸ್ತಿ ಪಿತ್ರಾರ್ಜಿತ ಆಸ್ತಿ ಇತ್ತು. ವಾದಿಯರ ಹಕ್ಕನ್ನು ನಷ್ಟಪಡಿಸಲು ವಾದಿಯರ ತಂದೆಗಾಗಲೀ ಅಥವಾ ನಮಗಾಗಲೀ ಅಥವಾ ಮೃತ ಚೆನ್ನಪ್ಪನಿಗಾಗಲೀ ಯಾವುದೇ ಹಕ್ಕು

ಇಲ್ಲ ಎಂದರೆ ಅವರ ಅಪ್ಪ ರೊಕ್ಕ ಪಡೆದುಕೊಂಡು ಹಕ್ಕುಬಿಟ್ಟುಕೊಟ್ಟ ನಂತರ ವಾದಿಗೆ ಹಕ್ಕು ಇರುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನುಡಿಯುತ್ತೇನೆ. ವಾದಿಯರಿಗೆ ಇರುವ ನ್ಯಾಯಯುತ ಹಿಸ್ಸೆ ಹಕ್ಕನ್ನು ತಪ್ಪಿಸಲೆಂದು ದುರುದ್ದೇಶದಿಂದ ಸುಳ್ಳು ತಕರಾರು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ.

**ಪಾಟಿ ಸವಾಲು ಇತರೆ ಪ್ರತಿವಾದಿಯರ ಪರ ಯಾವುದೇ ಕೋರಿಕೆ ಇಲ್ಲ. ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.